## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 583 |
| 2 | ಸದಸ್ಯರ ಹೆಸರು | : | ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 20-08-2026 |
| 4 | ಉತ್ತರಿಸುವವರು | : | ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬಿ-ಖಾತಾಯಿಂದ ಎ-ಖಾತಾ ಮಾಡಿಸಿಕೊಳ್ಳಲು ಸಾರ್ವಜನಿಕರಿಂದ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು: (ವಲಯವಾರು ಮಾಹಿತಿ ನೀಡುವುದು) | ಬೆಂಗಳೂರು ನಗರದ ಐದು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬಿ-ಖಾತೆಯಿಂದ ಎ-ಖಾತೆಗೆ ಪರಿವರ್ತನೆಗಾಗಿ ಸಾರ್ವಜನಿಕರಿಂದ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ ಹಾಗೂ ನಗರ ಪಾಲಿಕೆ / ವಲಯವಾರು ಅನುಮೋದಿತ ಮತ್ತು ತಿರಸ್ಕೃತ ವಿವರ **ಅನುಬಂಧ**ದಲ್ಲಿ ಒದಗಿಸಿದೆ. |
| ಆ) | ಈ ಪೈಕಿ ಇದುವರೆವಿಗೂ ಎ-ಖಾತಾ ನೀಡಿರುವ ಸ್ವತ್ತುಗಳ ಮಾಹಿತಿಯನ್ನು ವಲಯವಾರು ಮಾಹಿತಿ ನೀಡುವುದು; | |
| ಇ) | ಬೆಂಗಳೂರು ನಗರ, ಯಶವಂತಪುರ ಹೋಬಳಿ, ನಾಗದೇವನಹಳ್ಳಿಯ ರಾಜರಾಜೇಶ್ವರಿ ಬಡಾವಣೆಯ ಸರ್ವೆ ನಂ.3/5,6,7,8,9, 4/1,2,4, 5/2, 8/1ಎ, 1ಬಿ, 8/4,5, 8/2, 8/3, 2/10 ರಲ್ಲಿನ ಸ್ವತ್ತುಗಳಿಗೆ ಇ-ಖಾತಾ ಮಾಡದಿರಲು ಕಾರಣಗಳೇನು; | ಶ್ರೀ ರಾಜರಾಜೇಶ್ವರಿ ಬಡಾವಣೆಯ ನಿವೇಶನಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪತ್ರ ಸಂಖ್ಯೆ: ಬೆಂಅಪ್ರಾ/ನಯೋಸ/ಜಿವಿಟಿ-309/1253/2021-22, ದಿನಾಂಕ: 11-11-2021 ರಂತೆ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ನಾಗದೇವನಹಳ್ಳಿ ಗ್ರಾಮದ ಸರ್ವೇ ನಂ. 3/5, 3/6, 3/7, 11/1, 3/8, 3/9, 4/2, 4/1, 4/4, 4/5, 8/1ಬಿ, 8/4, 8/5, 8/2, 8/3, 2/10, 12/2ಬಿ ಮತ್ತು 5/1 ರಲ್ಲಿ ನಿರ್ಮಿಸಿರುವ ಬಡಾವಣೆಯು ಅನಧಿಕೃತವಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17 (2-E) ರನ್ವಯ ಯೋಜನಾ ಪ್ರಾಧಿಕಾರದಿಂದ ಬಿಡುಗಡೆಗೊಳ್ಳದಿರುವ ನಿವೇಶನಗಳಿಗೆ ಖಾತಾ ನೀಡಲು ಅವಕಾಶವಿಲ್ಲದೇ ಇರುವುದರಿಂದ ಹಾಗೂ ಪ್ರಸ್ತುತ ಬಡಾವಣೆಯು ಅನಧಿಕೃತ ಬಡಾವಣೆ ಆಗಿರುವುದರಿಂದ ಸದರಿ ಬಡಾವಣೆಯಲ್ಲಿನ ನಿವೇಶನಗಳಿಗೆ ಸಂಬಂಧಿಸಿದಂತೆ ಖಾತಾ ನೋಂದಾವಣೆ ಮಾಡುವುದು ಸೂಕ್ತವಲ್ಲವೆಂದು ಅಭಿಪ್ರಾಯ ನೀಡಿರುವುದರಿಂದ ಶ್ರೀ ರಾಜರಾಜೇಶ್ವರಿನಗರ ಬಡಾವಣೆಯ ನಿವೇಶನಗಳಿಗೆ ಬಿ.ಬಿ.ಎಂ.ಪಿ.ವತಿಯಿಂದ ಖಾತೆ ನೀಡಲಾಗುತ್ತಿರುವುದಿಲ್ಲ. |
| ಈ) | ಈ ಸ್ವತ್ತುಗಳಿಗೆ ಇ-ಖಾತಾ ನೀಡಲು ಸರ್ಕಾರ ನಿಗಧಿಪಡಿಸಿರುವ ಕಾಲಾವಧಿ ಎಷ್ಟು; ಯಾವಾಗ ಇ-ಖಾತಾ ನೀಡಲಾಗುವುದು; | |

**ನಅಇ 316 ಎಂಎಸ್‌ಯು 2026**

**(ಕೃಷ್ಣ ಬೈರೇಗೌಡ)**
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು

# ಅನುಬಂಧ-1

**ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಡಿ.ಟಿ.ಶ್ರೀನಿವಾಸ (ಶಿಕ್ಷಕರ ಕ್ಷೇತ್ರ) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:545 (583)**

**ಬಿ ಖಾತೆಯಿಂದ ಎ ಖಾತಾ ಮಾಡುವ ಬಗ್ಗೆ**

| | | | ವರದಿಯ ದಿನಾಂಕ | 14-08-2026 |
|---|---|---|---|---|
| **ನಗರ ಪಾಲಿಕೆ** | **ನಾಗರಿಕರಿಂದ ಸಲ್ಲಿಸಲಾದ ಅರ್ಜಿಗಳು** | **ಅನುಮೋದಿತ** | **ತಿರಸ್ಕೃತ** | **ಬಾಕಿ** |
| ಬೆಂಗಳೂರು ಕೇಂದ್ರ ನಗರ ಪಾಲಿಕೆ | 304 | 90 | 19 | 195 |
| ಬೆಂಗಳೂರು ಪೂರ್ವ ನಗರ ಪಾಲಿಕೆ | 9,163 | 4,692 | 790 | 3,681 |
| ಬೆಂಗಳೂರು ಪಶ್ಚಿಮ ನಗರ ಪಾಲಿಕೆ | 13,624 | 7,065 | 497 | 6,062 |
| ಬೆಂಗಳೂರು ಉತ್ತರ ನಗರ ಪಾಲಿಕೆ | 13,356 | 7,528 | 675 | 5,153 |
| ಬೆಂಗಳೂರು ದಕ್ಷಿಣ ನಗರ ಪಾಲಿಕೆ | 10,641 | 5,590 | 1,067 | 3,984 |
| **ಒಟ್ಟು** | **47,088** | **24,965** | **3,048** | **19,075** |

ಜಂಟಿ ಆಯುಕ್ತರು(ಕಂದಾಯ)
ಗ್ರೇಟರ್ ಬೆಂಗಳೂರು ಪ್ರಾಧಿಕಾರ